ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ
ಸಾಕ್ಷಿಗೆ ದಿನಾಂಕಃ **10-01-2023** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.1467/2010
CW-10 PW- 7

ಸಾಕ್ಷಿದಾರರ ಹೆಸರು - ಕೆಂಪಣ್ಣ ರಾಮಪ್ಪ ಗುಡಜ

ವಯಸ್ಸು - 58 ವರ್ಷ

ಉದ್ಯೋಗ - ಎ ಎಸ್ ಐ ರಾಯಭಾಗ ಪೊಲೀಸ ಠಾಣೆ

ಸಾಕೀನ - ರಾಯಭಾಗ

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2002 ರಿಂದ 2010 ರವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಪೊಲೀಸ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ-13 ರವರು ನನಗೆ ದಿಃ 16-02-2010 ರಂದು ಶೀಲ ಬಂದ್ ಮಾಡಿದ ಮೂರು ಪಾಕೀಟಗಳನ್ನು ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರು ರವರಿಗೆ ಮುಟ್ಟಿಸಲು ನೀಡಿದ್ದು ಮಾನ್ಯ ಡಿ.ವೈ.ಎಸ್.ಪಿ ಗೋಕಾಕ ರವರ ಅನುಮತಿ ಪತ್ರದೊಂದಿಗೆ ನಾನು ಸದರಿ ಮೂಾರು ಶೀಲ ಬಂದ್ ಮಾಡಿದ ಪಾಕೀಟಗಳನ್ನು ತಗೆದುಕೊಂಡು ಹೋಗಿ ದಿಃ 17-02-2010 ರಂದು ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರು ರವರಿಗೆ ನೀಡಿ ಅವರಿಂದ ಸ್ವೀಕೃತಿ ಪತ್ರ ತೆಗೆದುಕೊಂಡು ಬಂದು ದಿಃ 18-02-2010 ರಂದು ನನ್ನ ವರದಿಯನ್ನು ಚಾಸಾ-13 ರವರಿಗೆ ನೀಡಿರುತ್ತೇನೆ.

ನಾನೀಗ ಸದರಿ ವರದಿಯನ್ನು ನೋಡುತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ವರದಿಯನ್ನು ನಿಪಿ-34 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-34-ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ನಂ.**4, 5** ಮತ್ತು **8** ರವರ ಪರ ವಕೀಲರಾದ ಶ್ರೀ.ಬಿ ಕೆ ಜೆ ರವರಿಂದ**;**

ನನ್ನ ಸಮಕ್ಷಮ ಮೂರು ಪಾಕೀಟಗಳನ್ನು ಶೀಲು ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರುರವರು ನಾನು ನೀಡಿದ ಶೀಲು ಮಾಡಿದ ಮೂರು ಪಾಕೀಟಗಳನ್ನು ಇನ್ವರ್ಡ ಮಾಡಿಕೊಂಡು ನಂಬರ್ ನೀಡಿರುತ್ತಾರೆ. ನನಗೀಸ ಸದರಿ ಇನ್ವರ್ಡ ಸಂಖ್ಯೆ ನೆನಪಿಲ್ಲ. ನಾನು ಕೆ ಎಸ್ ಆರ್ ಟಿ ಸಿ ಬಸ್ಸ್ ಮುಖಾಂತರ ಬೆಂಗಳೂರಿಗೆ ಹೋಗಿರುತ್ತೇನೆ. ನನಗೆ ನೀಡಿದ ವಾರಂಟನ್ನು ನಾನು ಬೆಂಗಳೂರಿನಿಂದ ಬಂದು ತನಿಖಾಧಿಕಾರಿಗೆ ನಿಪಿ-34 ರ ದಾಖಲೆಯ ಜೊತೆಗೆ ನೀಡಿರುತ್ತೇನೆ. ನಾನು ತನಿಖಾಧಿಕಾರಿಗಳ ಮುಂದೆ ನೀಡಿದ ಹೇಳಿಕೆಯಲ್ಲಿ ನನಗೆ ನೀಡಿದ ವಾರಂಟನ್ನು ಮರಳಿ ನೀಡಿರುವ ಕುರಿತು ತಿಳಿಸಿರುವುದಿಲ್ಲ ಎಂದರೆ ಸರಿ. ನನಗೆ ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರು ರವರಿಗೆ ಕೊಡಲು ಕೊಟ್ಟ ಮೂರು ಪಾಕೀಟುಗಳ ಮೇಲೆ ಈ ಪ್ರಕರಣದ ಅಪರಾಧ ಸಂಖ್ಯೆ ಮತ್ತು ಯಾವ ವಿಧಿಗಳ ಮೂಲಕ ಶಿಕ್ಷಿಸಲ್ಪಡುವ ಅಪರಾಧವಾಗಿರುತ್ತದೆ ಎನ್ನುವ ಕುರಿತು ಬರೆದಿದ್ದರು.

ದಿಃ 16-02-2010 ರಂದು ನಾನು ಗೋಕಾಕಿನಿಂದ ಬೆಂಗಳೂರಿಗೆ ಹೋಗಿ ದಿಃ 17-02-2010 ರಂದು ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರು ರವರಿಗೆ ಮೂರು ಪಾಕೀಟುಗಳನ್ನು ಕೊಟ್ಟಿರುತ್ತೇನೆ

ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರು ರವರಿಗೆ ಯಾವುದೇ ಪಾಕೀಟುಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಕುಳಿತುಕೊಂಡು ನಿಪಿ-34 ರಂತೆ ವರದಿ ತಯಾರಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ನಿಪಿ-34 ರಂತೆ ವರದಿ ನೀಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ನಂ.**6** ಮತ್ತು **7** ರವರ ಪರ ವಕೀಲರಾದ ಶ್ರೀ.ಎಂ ಎನ್ ಸಿ ರವರಿಂದ;</u>

ಮೂರು ಪಾಕೀಟಗಳನ್ನು ಶೀಲು ಹಾಕಿ ಬಂದು ಮಾಡಿದಾಗ ನಾನು ಇರಲಿಲ್ಲ ಎಂದರೆ ಸರಿ. ಡಿ ವೈ ಎಸ್ ಪಿ ಗೋಕಾಕರವರು ನೀಡಿದ ಪತ್ರ ಮತ್ತು ಮೂರು ಪಾಕೀಟಗಳನ್ನು ದಿಃ 17-02-2010 ರಂದು ನಾನು ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರು ರವರಿಗೆ ನೀಡಿರುತ್ತೇನೆ. ಈ ಪ್ರಕರಣಕ್ಕೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ತನಿಖಾಧಿಕಾರಿಗಳ ಮಾತು ಕೇಳಿ ನಿಪಿ-34 ರಂತೆ ವರದಿ ನೀಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಿಃ 16-02-2010 ರಂದು ನಾನು ಗೋಕಾಕಿನಿಂದ ಬೆಂಗಳೂರಿಗೆ ಹೋಗಿ ದಿಃ 17-02-2010 ರಂದು ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರು ರವರಿಗೆ ಮೂರು ಪಾಕೀಟುಗಳನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸ ಅದೀಕ್ಷಕರು ಬೆರಳು ಮುದ್ರ ತಜ್ಞರು ಬೆಂಗಳೂರು ರವರಿಗೆ ಯಾವುದೇ ಪಾಕೀಟುಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಕುಳಿತುಕೊಂಡು ನಿಪಿ-34 ರಂತೆ ವರದಿ ತಯಾರಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

**(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೆ. ಕೇ. ಸರಿ ಇದೆ,**

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.